ಸಣ್ಣ ಕೇಸ್ ಅಂತಾ ಇದನ್ನು ಟ್ರೈನಿಗೆ ನೀಡಿ ತಪ್ಪು ಮಾಡಿದೆ... ನನ್ನ ಈ ಉಡಾಫೆಯಿಂದ ಈ ಹುಡುಗಿಯ ಪ್ರಾಣ ಹೋಯಿತಾ... ಸ್ವಲ್ಪ ಶೀಘ್ರವಾಗಿ ವಿಚಾರಣೆ ನಡೆಸಿದ್ದರೆ ಈ ಹುಡುಗಿಯ ಪ್ರಾಣ ಉಳಿಸಬಹುದಿತ್ತಾ... ಇಲ್ಲಿಯವರೆಗೂ ಕೈಕೊಡದಿದ್ದ ನನ್ನ ಪೊಲೀಸ್ ಬುದ್ಧಿ ಈ ಕೇಸ್‌ನ ಆಳವನ್ನು ಅರ್ಥ ಮಾಡಿಕೊಳ್ಳಲು ಯಾಕೆ ವಿಫಲವಾಯಿತು?' ಎಂಬೆಲ್ಲ ಅವನ ಯೋಚನೆಗಳಿಗೆ ಜಗದೀಶನ ಧ್ವನಿ ಕಡಿವಾಣ ಹಾಕಿತು.

'ಸರ್, ಮುಂದೇನು? ಶವ ಮಂಗಳಾ ಅವರದ್ದೇ ಅಂತಾ ಗುರುತಿಸಲಾಗಿದೆ. ಮೇಲುನೋಟಕ್ಕೆ ರೇಪ್ ಕೇಸ್ ಅಲ್ಲ ಅನಿಸುತ್ತಿದೆ...'

'ಸರಿ, ಶವವನ್ನು ಪೋಸ್ಟ್‌ಮಾರ್ಟಮ್‌ಗೆ ಕಳುಹಿಸು, ರಿಪೋರ್ಟ್ ಬಂದಮೇಲೆ ಶವವನ್ನು ಅವರ ಸುಪರ್ದಿಗೆ ಒಪ್ಪಿಸು.'

'ಸರ್, ಸದಾನಂದ ಅವರಿಗಾ ಅಥವಾ ಮಂಗಳಾ ಅವರ ತಂದೆ ತಾಯಿಗಾ?'

ಜಗದೀಶನ ಪ್ರಶ್ನೆ ಕೇಳಿ ಒಮ್ಮೆಲೇ ಪೂಜಾರಿ ಜಾಗೃತನಾದ.

'ಹೌದು, ಇಲ್ಲಿಯವರೆಗೆ ಹುಡುಗಿಯ ತಂದೆ ತಾಯಿ ಬಂದಿಲ್ಲ! ಕಾಣೆಯಾಗಿದ್ದ ಸಂದರ್ಭದಲ್ಲಿ ತಿಳಿಸಿರಲಿಲ್ಲ... ಒಪ್ಪಿಕೊಳ್ಳುವಂಥದ್ದು... ಆದರೆ ಈಗ ಅದೇ ಹುಡುಗಿ ಶವವಾಗಿದ್ದಾಳೆ. ವಿಷಯ ತಿಳಿದು ಆಗಲೇ ಆರೇಳು ಗಂಟೆಗಳಾಗಿವೆ... ಇಲ್ಲಿತನಕ ಆ ಹುಡುಗಿಯ ಅಪ್ಪ ಅಮ್ಮ ಎಲ್ಲಿ? ಸದಾನಂದನ ಫೋನ್ ಟ್ರಾಕಿಂಗ್‌ನಲ್ಲಿದೆ... ಅವನಿಂದ ಯಾವ ಫೋನೂ ಹೋಗಿಲ್ಲ. ಅವನಿಗೆ ಯಾವ ಫೋನೂ ಬಂದಿಲ್ಲ! ಶವ ನೋಡಿದರೆ ಸತ್ತು ಒಂದೆರಡು ದಿನ ಆದರೂ ಆಗಿದೆ ಅಂತಾ ಅನಿಸುತ್ತಿದೆ. ಅಂದರೆ ಕಿಡ್ನಾಪರ್ ಹುಡುಗಿ ಸತ್ತ ಮೇಲೆಯೇ ಫೋನ್ ಮಾಡಿದ್ದಾರೆಯೇ? ಹುಡುಗಿಯ ಅಪ್ಪನ ಕಡೆಯವರು ಈ ಕೆಲಸ ಮಾಡಿದ್ದರೆ ಐದು ಲಕ್ಷ ರೂಪಾಯಿ ಕೇಳುತ್ತಿರಲಿಲ್ಲ. ಸದಾನಂದ ಮಂಗಳಾ ಅನ್ನು ಬಲವಂತದಿಂದ ಕರೆದು ತಂದಿದ್ದರೆ ಅವರು ಅಲ್ಲಿಯ ಪೊಲೀಸ್‌ಗೆ ಕಂಪ್ಲೇಂಟ್ ಕೊಟ್ಟಿಲ್ಲವಾ... ಅವರಿಗೆ ಇಷ್ಟ ಇರಲಿಲ್ಲ ಅಂದರೆ ಬಂದು ಗಲಾಟೆ ಮಾಡಿಲ್ಲವೇಕೆ? ಕರೆದೊಯ್ಯಲಿಲ್ಲವೇಕೆ? ಎಲ್ಲ ಗೊತ್ತಿದ್ದೂ ಸುಮ್ಮನಿದ್ದರಾ...'

ಅವನ ಪ್ರಶ್ನೆಗಳಿಗೆ ಉತ್ತರ ಹುಡುಕುವ ಸಮಯ, ಸಂದರ್ಭ ಅದಲ್ಲ ಎಂದು ಅರಿತು ಸುಮ್ಮನಾದ. ತಾನು ಈ ಕೇಸನ್ನು ಸರಿಯಾಗಿ ನಿರ್ವಹಿಸಲಿಲ್ಲ. ಹಾಗಾಗಿ ಈ ಕೊಲೆ ಆಗಿದೆ. ಕಿಡ್ನಾಪರ್ ಯಾರೋ ಸದಾನಂದನನ್ನು ಹತ್ತಿರದಿಂದ ಬಲ್ಲವನಿರಬೇಕು. ತನಿಖೆ ಮಾಡುವಾಗ ಗೊತ್ತಾಗಿ ಎಲ್ಲಿ ಸಿಕ್ಕಿ ಬೀಳುತ್ತೇನೋ ಎಂದು ಹೆದರಿ ಹುಡುಗಿಯನ್ನು ಸಾಯಿಸಿರಬಹುದು... ಈ ಎಲ್ಲಾ ಆಲೋಚನೆಗಳಿಂದ ಇಡೀ ರಾತ್ರಿ ನಿದ್ರಿಸದಿದ್ದರೂ ಸಮಯಕ್ಕೆ ಸರಿಯಾಗಿ ಸ್ಟೇಶನ್‌ಗೆ ಬಂದ. ಸದಾನಂದ ಆಗಲೇ ಬಂದು ಅವನಿಗೆ ಕಾಯುತ್ತಿದ್ದ.

'ಸರ್, ನಮ್ಮ ಹುಡುಗಿಯ ಬಾಡಿ ಕೊಟ್ಟರೆ ಮುಂದಿನ ಕಾರ್ಯಗಳಿಗೆ ಅನುಕೂಲ ಆಗುತ್ತದೆ.'

'ಸರ್, ಬೆಳಗ್ಗೆಯಿಂದ ಇಲ್ಲಿಯೇ ಇದ್ದಾರೆ... ಬಹಳ ಪೀಡಿಸುತ್ತಿದ್ದಾರೆ...' ಅಲ್ಲಿಯೇ ಇದ್ದ ಕಾನ್‌ಸ್ಟೆಬಲ್ ಗೊಣಗಿದ.

ರಾತ್ರಿಯೆಲ್ಲ ನಿದ್ದೆ ಇಲ್ಲದ್ದಕ್ಕೋ ಅಥವಾ ಒತ್ತಡದಿಂದಲೋ ತುಸು ಏರುಧ್ವನಿಯಲ್ಲಿಯೇ, 'ಆಗಲ್ಲಾ ರೀ... ಹುಡುಗಿಯ ಅಪ್ಪ ಅಮ್ಮನಿಗೆ ಮಾತ್ರ ಬಾಡಿ ಕೊಡೋದು... ಇದು ಕೊಲೆ ಕೇಸ್ ಬೇರೆ...' ಗದರಿದ.

'ಸರ್, ಅವರಿಗೆ ವಿಚಾರ ತಿಳಿಸಿಯೇ ಇಲ್ಲ ಸರ್... ಅದಕ್ಕೆ ನಾವೇ ಸಂಸ್ಕಾರ ಮಾಡೋಣ ಅಂತಾ...' ಸಣ್ಣದಾಗಿ ನುಡಿದ ಸದಾನಂದ.